ಕರ್ನಾಟಕ ವಿಧಾನಸಭೆ

(13ನೇ ವಿಧಾನ ಸಭೆ. 2ನೇ ಅಧಿವೇಶನ)

115 ಶ್ರೀ ಅಮರೇಶ್ (ಮುಳಬಾಗಿಲು)

ಮಾನ್ಯ ವಸತಿ ಹಾಗೂ ಮುಜಯಾಯಿ

ಸಚಿವರು

ಅ) ಅತೀ ಹಿಂದುಳಿದ ಹಾಗೂ ಬರಪೀಡಿತ ಪ್ರದೇಶವಾದ ಮುಳಬಾಗಿಲು ತಾಲ್ಲೂಕಿಗೆ 2007–08 ರಲ್ಲಿ ಮಂಜೂರಾಗಿರುವ ಆಶ್ರಯ ಮನೆಗಳು ಎಷ್ಟು (ವಿವರ ನೀಡುವುದು);

2007–08ನೇ ಸಾಲಿಗೆ ರಾಜ್ಯ ಸರ್ಕಾರವು ಯಾವ ತಾಲ್ಲೂಕಿಗೂ ಮನೆಗಳ ನಿರ್ಮಾಣದ ಗುರಿಯನ್ನು ನಿಗದಿಪಡಿಸಿರುವುದಿಲ್ಲ. ಅದರಂತೆ ಈ ಸಾಲಿಗೆ, ಮುಳಬಾಗಿಲು ತಾಲ್ಲೂಕಿಗೂ ಗುರಿಯನ್ನು ನಿಗದಿಪಡಿಸಿವುದಿಲ್ಲ.

ಆ) ಮುಳಬಾಗಿಲು ತಾಲ್ಲೂಕಿಗೆ 2008–09ನೇ ಸಾಲಿನಲ್ಲಿ ಎಷ್ಟು ಆಶ್ರಯ ಮನೆಗಳನ್ನು ನೀಡಲು ತೀರ್ಮಾನಿಸಲಾಗಿದೆ; ಮಂಜೂರು ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಮುಳಬಾಗಿಲು ತಾಲ್ಲೂಕಿಗೆ 2008–09ನೇ ಸಾಲಿಗೆ ಗ್ರಾಮೀಣ ಆಶ್ರಯ ಯೋಜನೆಯಡಿ 1050 ಮನೆಗಳ ಗುರಿಯನ್ನು ನೀಡಲಾಗಿದೆ. ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಸಂಖ್ಯೆ: ವಇ 30 ಹೆಚ್‌ಎಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನ ಸಭೆ

117

ಶ್ರೀ ಅಮರೇಶ್ (ಮುಳಬಾಗಿಲು)

ಮಾನ್ಯ ಪಶುಸಂಗೋಪನಾ ಸಚಿವರು.

ಅ) ಕೋಲಾರ ಜಿಲ್ಲೆ, ಮುಳುಬಾಗಿಲು ತಾಲ್ಲೂಕಿನಲ್ಲಿ ಇರುವ ಪಶುಸಂಗೋಪನಾ ಕೇಂದ್ರಗಳು ಎಷ್ಟು ಹಾಗೂ ಪಶುಸಂಗೋಪನಾ ಕೇಂದ್ರಗಳಲ್ಲಿರುವ ಸಿಬ್ಬಂದಿ ವರ್ಗ ಎಷ್ಟು? (ವರ್ಗವಾರು ವಿವರ ನೀಡುವುದು).?

22 ಪಶುಸಂಗೋಪನಾ ಕೇಂದ್ರಗಳಿರುತ್ತವೆ. ಅವುಗಳ ವಿವರ ಕೆಳಕಂಡಂತಿರುತ್ತದೆ.

1.	ಪಶು ಆಸ್ಪತ್ರೆ	–	01
2.	ಪಶು ಚಿಕಿತ್ಸಾಲಯ	–	11
3.	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	–	04
4.	ಕೃತಕ ಗರ್ಭಧಾರಣಾ ಕೆಂದ್ರ	–	05
5.	ಸಂಚಾರಿ ಪಶು ಚಿಕಿತ್ಸಾಲಯ	–	01
	ಒಟ್ಟು	–	22

ಮೇಲ್ಕಂಡ 22 ಪಶುವೈದ್ಯ ಸಂಸ್ಥೆಗಳಲ್ಲಿ ಒಟ್ಟು 78 ಹುದ್ದೆಗಳು ಮಂಜೂರಾಗಿದ್ದು, ಅವುಗಳಲ್ಲಿ 42 ಹುದ್ದೆಗಳು ಭರ್ತಿಯಾಗಿದ್ದು, ಉಳಿದ 36 ಹುದ್ದೆಗಳು ಖಾಲಿ ಇವೆ. ವಿವರ ಈ ಕೆಳಗಿನಂತಿವೆ:

ಕ್ರ ಸಂ.	ಹುದ್ದೆಗಳ ವಿವರ	ಮಂಜೂರ	ಭರ್ತಿ	ಖಾಲಿ
1.	ಸಹಾಯಕ ನಿರ್ದೇಶಕರು	1	1	0
2.	ಪಶುವೈದ್ಯಾಧಿಕಾರಿ	13	6	7
3.	ಪಶುವೈದ್ಯಕೀಯ ಮೇಲ್ವಿಚಾರಕರು	1	1	0
4.	ಹಿರಿಯ ಪಶುಪರೀಕ್ಷಕರು	9	4	5
5.	ಪಶುಪರೀಕ್ಷಕರು	11	8	3
6.	ಪಶುವೈದ್ಯಕೀಯ ಸಹಾಯಕರು	7	3	4
7.	ದ್ವಿತೀಯ ದರ್ಜೆ ಸಹಾಯಕರು	1	1	0
8.	ವಾಹನ ಚಾಲಕರು	1	1	0
9.	'ಡಿ' ದರ್ಜೆ ನೌಕರರು	34	17	17
	ಒಟ್ಟು:	78	42	36

ಆ) ತಾಲ್ಲೂಕಿನ ಪಶುಸಂಗೋಪನಾ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ. ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಿ ಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಬಂದಿದೆ.

ರಾಜ್ಯದಲ್ಲಿ ಖಾಲಿಯಿರುವ ಪಶುವೈದ್ಯಾಧಿಕಾರಿಗಳ 200 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಗೊಂಡಿದೆ. ಈ ಆಯ್ಕೆ ಪಟ್ಟಿ ಸ್ವೀಕೃತವಾದ ಕೂಡಲೇ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಖಾಲಿಯಿರುವ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬರೆಯಲಾಗಿದೆ. ಅಲ್ಲಿಂದ ಆಯ್ಕೆಪಟ್ಟಿ ಬಂದ ಕೂಡಲೇ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತದೆ.

ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತದೆ.

ಪಶುವೈದ್ಯಕೀಯ ಸಹಾಯಕರ 4 ಹುದ್ದೆಗಳು ಖಾಲಿಯಿದ್ದು, ಇದರಲ್ಲಿ ದಿನಾಂಕ:17-02-2009 ರಂದು 07 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ

ಇ) ಕೋಲಾರ ಜಿಲ್ಲೆ, ಮುಳುಬಾಗಿಲು ತಾಲ್ಲೂಕಿಗೆ 2007-08 2008-09 ರಲ್ಲಿಸರ್ಕಾರದಿಂದ ಹೊಸದಾಗಿ ಎಷ್ಟು ಪಶುಸಂಗೋಪನಾ ಕೇಂದ್ರಗಳು ಮಂಜೂರಾಗಿರುತ್ತವೆ? ಮಂಜೂರಾಗಿದ್ದಲ್ಲಿ ಯಾವ ಯಾವ ಗ್ರಾಮ ಪಂಚಾಯತ್‌ಗಳಿಗೆ ಮಂಜೂರು ಮಾಡಲಾಗಿದೆ?

ಕೋಲಾರ ಜಿಲ್ಲೆ ಮುಳುಬಾಗಿಲು ತಾಲ್ಲೂಕಿನಲ್ಲಿ 2007-08ನೇ ಸಾಲಿನಲ್ಲಿ ಒಂದು ಪಶುಚಿಕಿತ್ಸಾಲಯವನ್ನು ತಿಮ್ಮಾರಾವುತನಹಳ್ಳಿ (ತಿಮ್ಮರಾವುತನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ) ತೆರೆಯಲು ಮಂಜೂರಾತಿ ನೀಡಲಾಗಿದೆ. 2008-09ನೇ ಸಾಲಿನಲ್ಲಿ ಯಾವುದೇ ಪಶುಚಿಕಿತ್ಸಾಲಯ ಮಂಜೂರಾಗಿರುವುದಿಲ್ಲ.

ಸಂಖ್ಯೆ: ಪಸಂಮೀ 133 ಪಸಸೇ 2009

(ರೇವೂನಾಯಕ್ ಬೇಳಮಗಿ)
ಪಶುಸಂಗೋಪನಾ ಸಚಿವರು.

ಕರ್ನಾಟಕ ವಿಧಾನಸಭೆ
13ನೇ ವಿಧಾನಸಭೆ 2ನೇ ಅಧಿವೇಶನ

119 ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು.

ಅ) ನಂಜುಂಡಪ್ಪ ವರದಿಯಲ್ಲಿ ಹಿಂದುಳಿದಿರುವ ತಾಲ್ಲೂಕುಗಳಿಗೆ ಗ್ರಾಮೀಣಾಭಿವೃದ್ಧಿಗೆ ವಿವಿಧ ಕಾಮಗಾರಿಗಳಿಗೆ, ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಿಗಿಂತ ಎಷ್ಟು ಹಣವನ್ನು ಹೆಚ್ಚಿಗೆ ಮೀಸಲಿಡಲಾಗಿದೆ (ವಿವರ ನೀಡುವುದು);